**A**

**CCE RR**
**UNREVISED**
**FULL SYLLABUS**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2023

**S.S.L.C. EXAMINATION, JUNE, 2023**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 14. 06. 2023 ] ಸಂಕೇತ ಸಂಖ್ಯೆ : **33-K**

Date : 14. 06. 2023 ] CODE NO. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 80

[ **Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | 4 × 1 = 4 |
| 1. | 'ದೇಶದ' ಪದದಲ್ಲಿರುವ ವಿಭಕ್ತಿಯ ಹೆಸರು<br>(ಎ) ತೃತೀಯಾ (ಬಿ) ಚತುರ್ಥಿ<br>(ಸಿ) ಷಷ್ಠಿ (ಡಿ) ಸಪ್ತಮಿ<br>ಉತ್ತರ : (ಸಿ) ಷಷ್ಠಿ | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಗೆಳೆಯರು ಸಂತಸದಿಂದ ಶಾಲೆಗೆ ಹೋದರು' — ಈ ವಾಕ್ಯದಲ್ಲಿ ಬಂದಿರುವ ಕ್ರಿಯಾಪದ<br>(ಎ) ಗೆಳೆಯರು (ಬಿ) ಹೋದರು<br>(ಸಿ) ಸಂತಸದಿಂದ (ಡಿ) ಶಾಲೆಗೆ<br>**ಉತ್ತರ :** (ಬಿ) ಹೋದರು | |
| 3. | 'ವೀರೇಶ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಲೋಪ ಸಂಧಿ (ಬಿ) ಆಗಮ ಸಂಧಿ<br>(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ<br>**ಉತ್ತರ :** (ಡಿ) ಗುಣ ಸಂಧಿ | |
| 4. | 'ಗಂಜಿಯುಂಡು' — ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ಕ್ರಿಯಾ ಸಮಾಸ (ಬಿ) ದ್ವಿಗು ಸಮಾಸ<br>(ಸಿ) ದ್ವಂದ್ವ ಸಮಾಸ (ಡಿ) ಅಂಶಿ ಸಮಾಸ<br>**ಉತ್ತರ :** (ಎ) ಕ್ರಿಯಾ ಸಮಾಸ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 12 × 1 = 12 |
| 5. | ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು ?<br>**ಉತ್ತರ :**<br>ಇಂದ್ರನು ಗಿಳಿಗೆ 'ಏನಾದರೂ ವರವನ್ನು ಕೇಳು ಕೊಡುತ್ತೇನೆ' ಎಂದು ಹೇಳಿ ತನಗಾದ ಸಂತೋಷವನ್ನು ಪ್ರಕಟಿಸಿದನು. | |
| 6. | ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು ?<br>**ಉತ್ತರ :**<br>ಪುಟ್ಟರಾಜರು ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. | |
| 7. | ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿಯಿರುತ್ತದೆ ?<br>**ಉತ್ತರ :**<br>ಶಿಷ್ಯರ ಅಭಿಲಾಷೆಗೆ ತಕ್ಕಂಥ ಜ್ಞಾನ ಕೊಡುವ ಶಕ್ತಿ ಶ್ರೇಷ್ಠ ಗುರುವಿನಲ್ಲಿ ಇರುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಗುರುರಾಜ ಕರ್ಜಗಿಯವರ ಅಂಕಣ ಬರಹದ ಶೀರ್ಷಿಕೆ ಯಾವುದು ?<br>**ಉತ್ತರ :**<br>ಗುರುರಾಜ ಕರ್ಜಗಿಯವರ ಅಂಕಣ ಬರಹದ ಶೀರ್ಷಿಕೆ 'ಕರುಣಾಳು ಬಾ ಬೆಳಕೆ'. | |
| 9. | ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ ?<br>**ಉತ್ತರ :**<br>ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಮುಂಬಯಿಯ ಮರೀನ್ ಡ್ರೈವ್‌ಗೆ ಹೋಲಿಸುತ್ತಾರೆ. | |
| 10. | ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?<br>**ಉತ್ತರ :**<br>ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು. | |
| 11. | ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ ?<br>**ಉತ್ತರ :**<br>ಗೋಪಾಲನ ಗೆಳೆಯರೆಲ್ಲರೂ ಸೇರಿ ಅವನನ್ನು ಹಾಸ್ಯ ಮಾಡುತ್ತಿದ್ದುದರಿಂದ ಅವನು ಹೊಸ ಪಂಚೆಯನ್ನು ಬಯಸಿದನು. | |
| 12. | ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು ?<br>**ಉತ್ತರ :**<br>ಏಣಿಯನ್ನು ಬಳಸಿ ಮೇಲೇರಿದವರು ಹೇಗೆ ಕೆಳಗೆ ಇಳಿಯುತ್ತಾರೆ ನೋಡುತ್ತೇನೆ ಎಂದು ಏಣಿ ಸವಾಲು ಹಾಕುತ್ತದೆ. | |
| 13. | ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ. ಅವರು ಹೇಳಿದ್ದಾರೆ ?<br>**ಉತ್ತರ :**<br>ಶಾಂತಿಯಿಂದ ಬದುಕಿ ನಮ್ಮ ಕರ್ತವ್ಯಗಳನ್ನು ಮುಗಿಸಬೇಕೆಂದು ಕವಿ ಸಿ.ಪಿ.ಕೆ. ಅವರು ಹೇಳಿದ್ದಾರೆ. | |
| 14. | ಎಂ. ಗೋಪಾಲಕೃಷ್ಣ ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು ?<br>**ಉತ್ತರ :**<br>ಎಂ. ಗೋಪಾಲಕೃಷ್ಣ ಅಡಿಗರ ಪ್ರಕಾರ ಹಿಡಿದ ದಾರಿಯಲ್ಲಿ ಗುರಿಮುಟ್ಟುವವರೆಗೆ ಸಾಗುವುದು ಪೌರುಷದ ಬಾಳ್ವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 15. | ಸೊನ್ನಲಿಗೆ ಸಿದ್ಧರಾಮರ ಪ್ರಕಾರ ಕೆರೆಗಳು ಯಾವಾಗ ನಿಷ್ಪ್ರಯೋಜಕವಾಗುತ್ತವೆ ?<br>**ಉತ್ತರ :**<br>ಸೊನ್ನಲಿಗೆ ಸಿದ್ಧರಾಮರ ಪ್ರಕಾರ ಕೆರೆಗಳನ್ನು ತೋಡಿ ನೀರು ಬರದೇ ಇದ್ದಾಗ ನಿಷ್ಪ್ರಯೋಜಕವಾಗುತ್ತವೆ. | |
| 16. | ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?<br>**ಉತ್ತರ :**<br>ಉತ್ತರನು ಕೌರವರ ಸೈನ್ಯವನ್ನು ಕಂಡು ಹೆದರಿ ನಿಟ್ಟೋಟದಲ್ಲಿ ಓಡಿದನು. | |
| **III.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು**<br>**( ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ತಾಯಿ ಸಿದ್ದಮ್ಮ ಪುಟ್ಟರಾಜನನ್ನು ಏನೆಂದು ಆಶೀರ್ವದಿಸಿದಳು ?<br>**ಉತ್ತರ :**<br>"ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತಭಾಗ್ಯ ನನ್ನದಾಗಲಿ ಸಂಸಾರ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ಬೇಡ. ಮಗನೇ ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನೀನು ನಡೆದು ಅಮರನಾಗು ಕಂದ'' ಎಂದು ಮಗನನ್ನು ಆಶೀರ್ವದಿಸಿದಳು. | |
| 18. | ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು ?<br>**ಉತ್ತರ :**<br>ಲಂಡನ್ ಟವರ್ ಬ್ರಿಜ್ ಪ್ರಮುಖವಾದುದು ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದೂವರೆ ಎರಡು ನಿಮಿಷದಲ್ಲಿ ಮೇಲಕ್ಕೆ ಎದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ. | |
| 19. | ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು ?<br>**ಉತ್ತರ :**<br>ಬನದಲ್ಲಿ ಏನು ಸೊಗಸು! ಏನು ಆನಂದ ! ಮಲ್ಲಿಗೆ, ಕೇದಗೆ, ಸಂಪಿಗೆಯ ಹೂವು! ಪರ್ವತಬಾಳೆಯ ಹೂವು! ಗೋರಂಟೆಯ ಹೂವು! ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು. ಆಮೇಲೆ ಹಕ್ಕಿಗಳ ಇಂಪಾದ ಗಾನ! ತಂಗಾಳಿ! ಸೂರ್ಯದೇವನ ಹೊಂಬೆಳಕು! ಹಸಿರಾದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಚಿಗುರ ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ! ಮನೆಗಿಂತ ಬನವೇ ಸೊಗಸು ಎಂದು ಹೂಬನವನ್ನು ವರ್ಣಿಸಿದನು. | |
| 20. | ಏಣಿ ಹೇಳಿಕೊಳ್ಳುವ ಕಷ್ಟಗಳೇನು ?<br>**ಉತ್ತರ :**<br>ಏಣಿಯು ಸಹಾಯದಿಂದ ಮೇಲೇರುವವರ ಒಂದೊಂದು ಹೆಜ್ಜೆಯ ಭಾರ ಹೊರುವ ಕಷ್ಟ ಏಣಿಗೆ ಮಾತ್ರ ಗೊತ್ತು. ಅದರ ಸಹಾಯಪಡೆದು ಮೇಲೇರುವವರಿಗೆ ಭಾರಹೊತ್ತವರ ಬಗ್ಗೆ ಯಾವ ಕಾಳಜಿಯೂ ಇಲ್ಲ. ಲೀಲಾಜಾಲವಾಗಿ ಮೇಲೇರಿ ಹಣ, ಅಂತಸ್ತು, ಅಧಿಕಾರ ಪಡೆದು ತಮ್ಮ ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುತ್ತಾರೆ ಎಂದು ತನ್ನ ಕಷ್ಟಗಳನ್ನು ಏಣಿಯು ಹೇಳಿಕೊಳ್ಳುತ್ತದೆ. | |
| 21. | ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ತಮ್ಮ ವಚನದಲ್ಲಿ ಹೇಗೆ ಖಂಡಿಸಿದ್ದಾರೆ ?<br>**ಉತ್ತರ :**<br>ನೀರನ್ನು ಕಂಡಲ್ಲಿ ಮುಳುಗುವ, ಮರವನ್ನು ಕಂಡಲ್ಲಿ ಸುತ್ತುವ ಅರ್ಥವಿಲ್ಲದ ಆಚರಣೆಗಳನ್ನು ಬಸವಣ್ಣನವರು ಖಂಡಿಸುತ್ತಾರೆ. ವೈಚಾರಿಕತೆಯುಳ್ಳ ಸಮಾಜವನ್ನು ಕಟ್ಟಬಯಸುವ ಬಸವಣ್ಣನವರು ಕಾಯಕ ತತ್ವಕ್ಕೆ ಮಹತ್ವ ನೀಡುತ್ತಾರೆ. ಬತ್ತುವ ಜಲವನ್ನು ಒಣಗುವ ಮರವನ್ನು ಮೆಚ್ಚಿದವರು ಶಾಶ್ವತವಾದ ಭಗವಂತನ ಅಸ್ತಿತ್ವವನ್ನು ಅರಿಯಲಾರರು ಎಂಬುದನ್ನು ಬಸವಣ್ಣನವರು ತಮ್ಮ ವಚನದಲ್ಲಿ ಹೇಳಿದ್ದಾರೆ. | |
| 22. | ಶತ್ರುಬಲಕೆ ನಮೋ ಎಂದು ಉತ್ತರನು ಏಕೆ ಹೇಳಿದನು ?<br>**ಉತ್ತರ :**<br>ಕೌರವರ ಮಹಾಸಾಗರದಂತಹ ಸೈನ್ಯವನ್ನು ನೋಡಿ ಹೆದರಿದ ಉತ್ತರನು ಹೀಗೆ ಹೇಳಿದನು. ಬರಿಯ ಕಣ್ಣುಗಳಿಗೆ ನಿಲುಕಲಾರದಂತಹ ಸೈನ್ಯ ಇದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಭೂಮಿಯೇ ಇಂತಹ ಮಹಾಸೈನ್ಯಕ್ಕೆ ಜನ್ಮ ನೀಡಿರಬಹುದು. ಹಾಗಿರುವಾಗ ಈ ಸೈನ್ಯದೊಂದಿಗೆ ಸಾಕ್ಷಾತ್ ಶಿವನೇ ಬಂದು ಕಾದಾಡಬೇಕೇ ಹೊರತು ನಮ್ಮಿಂದ ಸಾಧ್ಯವಿಲ್ಲ ಎಂದು ಉತ್ತರನು ಶತ್ರುಸೈನ್ಯವನ್ನು ಕಂಡು 'ನಮೋ' ಎಂದು ಕೈ ಮುಗಿದನು. | |
| 23. | ಭೀಮನಾಯಕನು ವೈದ್ಯರಿಗೆ ಕೃತಜ್ಞತೆಯನ್ನು ಸಲ್ಲಿಸಿದ ಬಗೆಯನ್ನು ವಿವರಿಸಿ.<br>*ಉತ್ತರ :*<br>ಭೀಮನಾಯಕ ವೈದ್ಯರ ಕಾಲಮೇಲೆ ಬಿದ್ದು ಹೇಳಿದ ; ಆ ಕಾಣದ ದೇವರು ಇದ್ದಾನೋ ಇಲ್ಲವೋ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು! ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ ಎಂದು ಕೈಮುಗಿದು ಕೃತಜ್ಞತೆ ಸಲ್ಲಿಸಿದನು. ತಾನು ಕದ್ದಿದ್ದ ವಸ್ತುಗಳನ್ನು ಒಂದಿರುಗಿಸಿ ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸುತ್ತಿದ್ದೇನೆ. ನನ್ನನ್ನು ಕ್ಷಮಿಸಿ, ದಯವಿಟ್ಟು ಎಲ್ಲವನ್ನು ಒಪ್ಪಿಸಿಕೊಳ್ಳಬೇಕು ಎಂದು ಬೇಡಿಕೊಂಡನು. | |
| 24. | ನಾಗರೀಕತೆಯ ಬೆಳವಣಿಗೆಯ ಬಗ್ಗೆ ಕವಯಿತ್ರಿಗೆ ಯಾವ ಅಳುಕು ಇದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>*ಉತ್ತರ :*<br>ಬೆಳೆಯುತ್ತಿರುವ ನಗರ ಮತ್ತು ನಾಗರೀಕತೆಗಳು ನಿಸರ್ಗದ ಸಂಪತ್ತುಗಳೆಲ್ಲವನ್ನು ತಿಂದು ತೇಗುತ್ತಿವೆ. ಬಗೆಬಗೆಯ ಕಾರು, ಪಟಪಟ ಮೋಟಾರು, ಲೋಹದ ಹಕ್ಕಿಗಳ ಹಾರಾಟಗಳಿಂದ ಜೀವದ ಇಂಧನಗಳು ತೀರಿಹೋಗುತ್ತಿವೆ. ಹಾರುವ ಹಕ್ಕಿಗಳು, ಹಸಿರಿನ ವಾತಾವರಣಗಳೆಲ್ಲ ತೀರುತ್ತಲಿವೆ. ನಿಸರ್ಗ ಸಂಪತ್ತುಗಳೆಲ್ಲ ತೀರಿಹೋದ ಮೇಲೆ ನಾಳೆಯ ಬದುಕು ಎಂತೋ ಏನೋ ಎಂಬ ಅಳುಕು ಮೂಡುತ್ತಿದೆ ಎಂದು ಕವಯಿತ್ರಿ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | *ಸಿ.ಪಿ. ಕೃಷ್ಣಕುಮಾರ್ :* | |

*ಉತ್ತರ :*

ಸಿ.ಪಿ.ಕೆ. ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ ಅವರು ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನ ಹಳ್ಳಿಯಲ್ಲಿ ೧೯೩೯ ರಲ್ಲಿ ಜನಿಸಿದರು. ವಿದ್ಯಾರ್ಥಿ ದೆಸೆಯಲ್ಲಿ ತಮ್ಮ ಕವನಕ್ಕಾಗಿ ಬಿ.ಎಂ.ಶ್ರೀ. ಅವರ ರಜತೋತ್ಸವ ಸುವರ್ಣಪದಕವನ್ನು ಪಡೆದಿದ್ದರು. 'ತಾರಾಸುಖಿ' ಇವರ ಮೊಟ್ಟಮೊದಲ ಕವನ ಸಂಕಲನ. ಸಿಪಿಕೆ ಅವರ ಮುಖ್ಯ ಕೃತಿಗಳೆಂದರೆ - 'ಅನಂತಪ್ರಸ್ಥಿ', 'ಬೊಗಸೆ', 'ಕನ್ನಡ ಚತುರ್ಮುಖಿ', 'ಕಾವ್ಯಾರಾಧನಾ', 'ಜನಪದ ಪ್ರತಿಭೆ', 'ಪರಿಭಾವನೆ', 'ಸಾಹಿತ್ಯ ತತ್ವಗಳು', 'ಪಾಶ್ಚಾತ್ಯ ಕಾವ್ಯಚಿಂತನ', 'ಕನ್ನಡ ನಾಗಾನಂದ', 'ಕನ್ನಡ ರತ್ನಾವಳಿ', 'ಕನ್ನಡ ನಾಗಾನಂದ' - ಮುಂತಾಗಿ ಸುಮಾರು ೩.೦೦ ಕೃತಿಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯದ ಬಹುಮುಖಿ ಕೊಡುಗೆಗಾಗಿ ಸಂದ ಪ್ರಶಸ್ತಿಗಳು ಹಲವಾರು. ಮುಖ್ಯವಾಗಿ 'ಬಸವ ಸಾಹಿತ್ಯ ಶ್ರೀ', 'ವಿದ್ವತ್ ಶಿರೋಮಣಿ', 'ಹನಿಗವನ ಹರಿಕಾರ', ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಜಾನಪದ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತಜ್ಞ' ಪ್ರಶಸ್ತಿ ಇತ್ಯಾದಿ. ಇವರು ೨೦೧೧ ರಲ್ಲಿ ಗಂಗಾವತಿಯಲ್ಲಿ ನಡೆದ ೭೮ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |
| **V.** | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ<br>ನೆಲೆಯಿರದೆ ತೊಳಲುವುದು ಮನುಜ ಜೀವನವೇ ?<br>ನನೆಬೇಕು, ಕೊನೆಬೇಕು ನರನ ಬಾಳುವೆಗೆ<br>ದಿನದ ಗೈಮೆಯ ಹೂವು ಫಲಿಸಿ ಬರುವುದಕೆ.<br>*ಉತ್ತರ :*<br>ಈ ಪದ್ಯಭಾಗವನ್ನು ಕವಿ ಎಂ. ಗೋಪಾಲಕೃಷ್ಣ ಅಡಿಗರು ಬರೆದ 'ಗುರಿ' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ನಮ್ಮ ಮನಸ್ಸು ಹಲವಾರು ಈಡೇರದ ಆಸೆಗಳ ಸುಳಿಯಲ್ಲಿ ಸಿಲುಕಿಕೊಂಡರೆ ಅವುಗಳಿಂದ ಬಿಡಿಸಿಕೊಂಡು ಬರಲು ತುಂಬಾ ಕಷ್ಟಪಡಬೇಕಾಗುತ್ತದೆ. ಜೀವನಪೂರ್ತಿ ಬಳಲಬೇಕಾಗುತ್ತದೆ. ಆದ್ದರಿಂದ ನಾವು ಜೀವನದಲ್ಲಿ ದೃಢವಾದ ಒಂದೇ ಗುರಿಯನ್ನು ಇಟ್ಟುಕೊಂಡು ಅದರ ಸಾಧನೆಗಾಗಿ ಹಗಲಿರುಳು ಶ್ರಮಿಸಬೇಕೇ ಹೊರತು ಹಲವಾರು ಗುರಿಗಳನ್ನು ಹೊಂದಿ ಯಶಸ್ಸು ಕಾಣಲು ಸಾಧ್ಯವಿಲ್ಲ. ಮಾನವ ಜನ್ಮವು ಸಾರ್ಥಕತೆಯಿಂದ ಅರಳಿ ನಮ್ಮ ಗುರಿಯನ್ನು ಸಾಧಿಸಬೇಕಾದರೆ ಪ್ರತಿದಿನವೂ ಶ್ರಮಪಡಬೇಕು. ಪ್ರಾಮಾಣಿಕ ದುಡಿಮೆಯ ಪ್ರತಿಫಲವಾಗಿ ಸಾರ್ಥಕತೆ ದೊರೆಯುತ್ತದೆ. ನಿರ್ದಿಷ್ಟವಾದ ಗುರಿಯನ್ನು ಹೊಂದಿ ಅದಕ್ಕೆ ತಕ್ಕ ಪರಿಶ್ರಮವನ್ನು ಪಟ್ಟು ಹಗಲಿರುಳೂ ಶ್ರಮಿಸಿದರೆ ಮಾನವ ಜನ್ಮ ಸಾರ್ಥಕತೆಯನ್ನು ಹೊಂದುತ್ತದೆ ಎಂಬುದು ಈ ಪದ್ಯದ ಸಾರಾಂಶವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ನೆಲದಮ್ಮ ನವವಧುವಿನಂತೆ ಸುಂದರವಾಗಿ ಕಾಣುತ್ತಾಳೆ." | |
| | *ಉತ್ತರ :* | |
| | ಅಲಂಕಾರದ ಹೆಸರು : ಉಪಮಾಲಂಕಾರ | |
| | ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ. | |
| | ಉಪಮೇಯ : ನೆಲದಮ್ಮ | |
| | ಉಪಮಾನ : ನವವಧು | |
| | ಉಪಮಾವಾಚಕ : ಅಂತೆ | |
| | ಸಮಾನಧರ್ಮ : ಸುಂದರವಾಗಿ ಕಾಣುವುದು | |
| | ಸಮನ್ವಯ : ಇಲ್ಲಿ 'ನೆಲದಮ್ಮ' ಎಂಬ ಉಪಮೇಯವನ್ನು 'ನವವಧು' ಎಂಬ ಉಪಮಾನದಿಂದ 'ಸುಂದರವಾಗಿ ಕಾಣುವುದು' ಎಂಬ ಸಮಾನಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | "ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ." ಅಥವಾ "ಮಾಡಿದ್ದುಣ್ಣೋ ಮಹಾರಾಯ." | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VIII. | ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು : | 5 × 3 = 15 |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು-ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ."<br>*ಉತ್ತರ :*<br>ಈ ವಾಕ್ಯವನ್ನು ಅ.ರಾ. ಮಿತ್ರರವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಒಣಗಿದ ಮರದಲ್ಲಿ ವಾಸವಿರುವ ಗಿಳಿಯನ್ನು ಕಂಡು ಇಂದ್ರನು ಆಶ್ಚರ್ಯದಿಂದ ಪ್ರಶ್ನಿಸಿದಾಗ ಗಿಳಿಯು ಇಂದ್ರನಿಗೆ ಈ ಮಾತನ್ನು ಹೇಳಿತು. ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ. ತನ್ನ ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲೇ ? ಎಂದು ಗಿಳಿಯು ಕೇಳುವ ಈ ಮಾತಿನಲ್ಲಿ ಅದರ ಉಪಕಾರ ಸ್ಮರಣೆಯ ಮನೋಭಾವ, ಪರಹಿತಾಕಾಂಕ್ಷೆಯ ಗುಣ, ತತ್ವನಿಷ್ಠೆಯ ಗುಣಗಳು ಸ್ವಾರಸ್ಯವಾಗಿ ವ್ಯಕ್ತವಾಗಿವೆ. | |
| 30. | "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ."<br>*ಉತ್ತರ :*<br>ಈ ವಾಕ್ಯವನ್ನು ಬಿ.ಎಸ್. ಕೃಪಾಕರ ಮತ್ತು ಕೆ. ಸೇನಾನಿಯವರು ಕೆ. ಪುಟ್ಟಸ್ವಾಮಿಯವರ ಜೊತೆಗೂಡಿ ರಚಿಸಿದ 'ಜೀವಜಾಲ' ಕೃತಿಯಿಂದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಹಕ್ಕಿಗೂಡುಗಳು ಹಕ್ಕಿಗಳ ತಂತ್ರಜ್ಞಾನ, ಅವುಗಳು ಪಡುವ ಶ್ರಮ ಮತ್ತು ಪಡೆದಿರುವ ಕುಶಲತೆಗೆ ಹಿಡಿದ ಕನ್ನಡಿ. ಕೆಲವು ಕೀಟ, ಉರಗ ಸಂತತಿ ಮತ್ತು ಕೆಲವು ಸಸ್ತನಿಗಳೂ ಗೂಡುಕಟ್ಟುತ್ತವೆ. ಆದರೆ ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡುಕಟ್ಟುವ ಚಾಕಚಕ್ಯತೆ ಬೇರಾವುದಕ್ಕೂ ಬಾರದು. ಭಿನ್ನವಾದ ವಸ್ತುಗಳನ್ನು ಬಳಸಿ ಗೂಡನ್ನು ಅಂದಗೊಳಿಸುವ ಹಾಗೂ ಸಿಮೆಂಟ್ ಗಾರೆಗಿಂತಲೂ ಭಿನ್ನವಾದ ವಸ್ತುಗಳನ್ನು ಬಳಸಿ ಗೂಡಿನ ಒಳಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು ಇಲ್ಲಿ ವಾಸ್ತುಶಿಲ್ಪಿಗಳ ಕಲ್ಪನೆ ಸಾಕಾರಗೊಳ್ಳುತ್ತವೆ ಎಂದು ಲೇಖಕರು ಹೇಳುವ ಈ ಮಾತಿನಲ್ಲಿ ಹಕ್ಕಿಗಳ ಕೌಶಲ್ಯತೆ ಚಾಕಚಕ್ಯತೆ, ತಂತ್ರಜ್ಞಾನ ಕೆಲವೊಮ್ಮೆ ಮನುಷ್ಯನ ಜಾಣ್ಮೆಗೂ ಮಿಗಿಲಾದುದು ಎಂಬ ಸ್ವಾರಸ್ಯ ವ್ಯಕ್ತವಾಗಿದೆ.

31. "ನೀವು ಗಮನಿಸಿದ್ದೀರಾ ? ನೀವೆಲ್ಲ ಎಂಥ ಕಪ್ಪು ಆರಿಸಿಕೊಂಡಿದ್ದೀರಿ ?"

***ಉತ್ತರ :***

ಈ ವಾಕ್ಯವನ್ನು ಗುರುರಾಜ ಕರ್ಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಪುಸ್ತಕದಿಂದ ಆಯ್ದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಹಳೆಯ ವಿದ್ಯಾರ್ಥಿಗಳು ಗುರುಗಳನ್ನು ಮಾತನಾಡಿಸಲು ಮನೆಗೆ ಬಂದ ಸಂದರ್ಭದಲ್ಲಿ ಗುರುಗಳೇ ತಮ್ಮ ಕೈಯಾರೆ ಕಾಫೀ ಮಾಡಿ ತಂದು ಬಗೆಬಗೆಯ ಕಪ್ಪುಗಳನ್ನು ತಂದಿಟ್ಟರು. ವಿದ್ಯಾರ್ಥಿಗಳಿಗೆ ಕಾಫಿ ಹಾಕಿಕೊಳ್ಳುವಂತೆ ಸೂಚಿಸಿದರು. ಎಲ್ಲಾ ವಿದ್ಯಾರ್ಥಿಗಳು ಬೆಲೆಬಾಳುವ ಕಪ್ಪುಗಳನ್ನೇ ಆರಿಸಿಕೊಂಡು ಸಾಧಾರಣವಾದ ಕಪ್ಪುಗಳನ್ನು ಬಿಟ್ಟು ಬಂದರು. ಈ ಸಂದರ್ಭದಲ್ಲಿ ಗುರುಗಳು ಹೇಳುವ ಮಾತು ಇದು. ಜೀವನದಲ್ಲಿ ಉತ್ತಮವಾದದ್ದನ್ನೇ ಪಡೆಯಬೇಕು ಎನ್ನುವ ಆಸೆ ನಿಮ್ಮದು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆದರೆ ಅದೇ ನಿಮ್ಮ ಸಮಸ್ಯೆಗಳಿಗೂ ಕಾರಣ ಎಂದು ಹೇಳುವ ಗುರುಗಳ ಮಾತಿನಲ್ಲಿ ವಿದ್ಯಾರ್ಥಿಗಳ ಜೀವನದ ಬಗೆಗಿನ ಕಾಳಜಿ, ವಾತ್ಸಲ್ಯ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 32. | "ತಪಸ್ಸಿಗಿಂತ ಜೀವಪ್ರೀತಿ ದೊಡ್ಡದೆಂದು ತಿಳಿದನು."<br>*ಉತ್ತರ :*<br>ಈ ವಾಕ್ಯವನ್ನು ಡಾ. ಬಸವರಾಜ ಸಬರದ ಅವರು ರಚಿಸಿದ 'ಪದಕಟ್ಟಿ ಹಾಡೇನ' ಎಂಬ ಕೃತಿಯಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಸಿದ್ಧಾರ್ಥನು ಬದುಕಿನ ಅರ್ಥವನ್ನು ತಿಳಿದು ಬುದ್ಧನಾದ ಸಂದರ್ಭವನ್ನು ವಿವರಿಸುತ್ತ ಕವಿ ಹೇಳುವ ಮಾತು ಇದು. ಕಾಡಿನಿಂದ ಸಿದ್ಧಾರ್ಥನು ನಾಡಿನ ಕಡೆ ಹೊರಟನು. ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು. ತಪಸ್ಸಿಗಿಂತ ಜೀವಪ್ರೀತಿಯೇ ದೊಡ್ಡದು ಎಂಬ ಬದುಕಿನ ಗೂಢಾರ್ಥವನ್ನು ಅರಿತು ಬುದ್ಧನಾದನು. ಕವಿಯ ಈ ಮಾತಿನಲ್ಲಿ ಕರುಣೆ. ಜೀವಪ್ರೀತಿ ಎಂಬುದು ತಪಸ್ಸಿಗಿಂತ ದೊಡ್ಡದು ಎಂಬ ಮೌಲ್ಯ ವ್ಯಕ್ತವಾಗಿದೆ. | |
| 33. | "ಕಬ್ಬಕ್ಕಿ ಬಾಯ ಬಿಡುತಾವೆ."<br>*ಉತ್ತರ :*<br>ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿರುವ 'ಕನ್ನಡ ಜನಪದ ಸಾಹಿತ್ಯ ಭಂಡಾರ' ಪುಸ್ತಕದಿಂದ ಆಯ್ದ 'ಮೂಡಲ್ ಕುಣಿಗಲ್ ಕೆರೆ' ಎಂಬ ಜನಪದಗೀತೆಯಿಂದ ಆರಿಸಿಕೊಳ್ಳಲಾಗಿದೆ.<br>ಮೂಡಲ್ ಕುಣಿಗಲ್ ಕೆರೆಯ ಸುಂದರ ಸನ್ನಿವೇಶಗಳನ್ನು ತಮ್ಮ ಹಾಡಿನ ಮೂಲಕ ಜನಪದರು ಪ್ರಚುರಪಡಿಸುತ್ತಾರೆ. ಕೆರೆಯ ನೀರನ್ನು ಕುಡಿದು ಬೆಳೆದ ಮೀನುಗಳೇ ಮೊದಲಾದ ಜಲಚರಗಳನ್ನು ತಿನ್ನಲು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಬ್ಬಕ್ಕಿಗಳು ಹಾತೊರೆಯುತ್ತ ಬಾಯಿ ಬಿಡುತ್ತವೆ. ಇನ್ನೊಂದು ಕಡೆ ದಷ್ಟಪುಷ್ಟವಾಗಿ ಬೆಳೆದು ನಿಂತ ಬಾಳೆಯ ಮರಗಳು ಗಾಳಿಗೆ ಅತ್ತಿಂದಿತ್ತ ಹೊಯ್ದಾಡುತ್ತವೆ ಎಂದು ಹೇಳುತ್ತ ಕೆರೆಯ ಸುತ್ತಲಿನ ಸುಂದರ ಪರಿಸರದ ಸನ್ನಿವೇಶಗಳನ್ನು ಜನಪದರು ವರ್ಣಿಸುತ್ತಾರೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :** | |
| | **(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | 1 × 4 = 4 |
| 34. | ಕೊರಡ ಕೊನರಿಸಿ ............................................<br>..............................................................<br>..............................................................<br>.................................................. ಮತ್ತೇರಿದೆ.<br>ಅಥವಾ<br>ಯುಗದ ಹಿಂದಿನ ............................................<br>..............................................................<br>..............................................................<br>................................................ ಸವಿಚೈತ್ರವು.<br>ಉತ್ತರ :<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ.<br>ಅಥವಾ<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು ಎಂಬುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.<br>ಅಥವಾ<br>"ಕೃಷಿಕ ನಾಡಿನ ಬೆನ್ನೆಲುಬು" ಈ ಮಾತನ್ನು ಪ್ರಶಂಸನೀಯ ಅಂಶಗಳೊಂದಿಗೆ ಸಮರ್ಥಿಸಿ.<br>*ಉತ್ತರ :*<br>'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆ ಮಾತೇ ಇದೆ. ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರೆವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲುದು. ಒಂದು ಸರ್ಕಾರ ಉರುಳಿಸಿ ಇನ್ನೊಂದು ಸರ್ಕಾರ ತರಬಹುದು ಈ ನಿಟ್ಟಿನಲ್ಲಿ ಬರೆವಣಿಗೆ ಅಷ್ಟೊಂದು ಶಕ್ತಿಶಾಲಿಯಾದುದು. ಸಾಹಿತ್ಯಗಳಲ್ಲಿನ ಸತ್ವದಿಂದಾಗಿ ಸಾಹಿತಿಗಳಿಗೆ ನಾಡಿನೆಲ್ಲೆಡೆ ಅಪಾರ ಗೌರವವಿದೆ. ಇಂಥ ಸತ್ವಯುತ ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜ ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ. ಬಸವಾದಿ ಶಿವಶರಣರ ವಚನಗಳು, ದಾಸರ ಕೀರ್ತನೆಗಳು, ಕುವೆಂಪು, ಬೇಂದ್ರೆಯಂಥವರ ಕಾವ್ಯ ಇವತ್ತಿಗೂ ಜನರ ಮೇಲೆ ಸತ್ಪರಿಣಾಮ ಬೀರಲು ಅಲ್ಲಿರುವ ಮೌಲ್ಯಗಳು ಹಾಗೂ ಸತ್ವವೇ ಕಾರಣ. ಇದನ್ನು ಗಮನಿಸಿ ಹಿರಿಯರು ದೇಶದ ಪ್ರಗತಿಯಲ್ಲಿ ಮಸಿಯು ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರೆ ಉತ್ಪ್ರೇಕ್ಷೆ ಎಂದೆನಿಸದು.<br>ಅಥವಾ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | 'ಕೃಷಿಕ ನಮ್ಮ ನಾಡಿನ ಬೆನ್ನೆಲುಬು' ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು ಎನ್ನುವ ಮಾತಿದೆ. ಅಂದರೆ ಕೃಷಿಕನೇನಾದರೂ ಸತ್ಯಾಗ್ರಹ ಮಾಡಿ ಒಂದು ವರ್ಷ ನಾವು ಬೆಳೆ ಬೆಳೆಯುವುದಿಲ್ಲ, ಭೂಮಿಯನ್ನು ಉಳುವುದಿಲ್ಲ ಎನ್ನುವ ತೀರ್ಮಾನ ಮಾಡಿದರೆ ಪರಿಸ್ಥಿತಿ ಏನಾಗಬಹುದು ಆಹಾರವಿಲ್ಲದೇ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವಿಲ್ಲ. ಅಕ್ಕಿ, ಬೇಳೆ, ತರಕಾರಿಯನ್ನು ತಯಾರಿಸುವುದು ಯಾವ ಕಾರ್ಖಾನೆಯಿಂದಲೂ ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು. ಹಾಗಾಗಿಯೇ ಸರ್ವಜ್ಞ. 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು ಮೇಟಿಯಿಂ ರಾಟೆ ನಡೆದುದಲ್ಲದೇ ದೇಶದಾಟವೇ ಕೆಡಗುಂ' ಎಂದು ಹೇಳಿರುವುದು ಮಹತ್ವವೆನಿಸಿದೆ. ಕೋಟಿ ವಿದ್ಯೆಗಳಲ್ಲಿ ವ್ಯವಸಾಯವೇ ಮೇಲು ಆ ವ್ಯವಸಾಯವೇ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ದೇಶದ ಪ್ರತಿಯೊಂದು ಆಟವೂ ಅಂದರೆ ಚಟುವಟಿಕೆಯೂ, ಪ್ರಗತಿಯೂ ಬೇಸಾಯವನ್ನೇ ಅವಲಂಬಿಸಿದೆ. ಹಾಗಾಗಿ 'ಕೃಷಿಕನೇ ಈ ನಾಡಿನ ಬೆನ್ನೆಲುಬು' ಎನ್ನುವುದು. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**( ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು )** | **1 × 4 = 4**<br>**( 2 + 2 )** |
| 36. | ಭಾರತೀಯರಾದ ನಾವು ನಮ್ಮ ರಾಷ್ಟ್ರದ ಸಂಸ್ಕೃತಿ ಮತ್ತು ಪರಂಪರೆಗಳಿಗೆ ತಕ್ಕಂತೆ ಅನೇಕ ಹಬ್ಬ, ಜಯಂತಿ, ವರ್ಧಂತಿ ಮೊದಲಾದವುಗಳನ್ನು ಆಚರಿಸುತ್ತೇವೆ.<br><br>ಕೆಲವು ಹಬ್ಬಗಳನ್ನು ಜಾತಿ, ಮತ, ಪಂಥಗಳ ಭೇದವಿಲ್ಲದೇ. ಪ್ರಾದೇಶಿಕ ಪರಿಗಣನೆ ಇಲ್ಲದೇ ರಾಷ್ಟ್ರೀಯ ಭಾವೈಕ್ಯತೆ ಹಾಗೂ ರಾಷ್ಟ್ರದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಏಳಿಗೆಯ ದೃಷ್ಟಿಯಿಂದ ಎಲ್ಲರೂ ಕೂಡಿ ಆಚರಿಸುತ್ತೇವೆ. ಇವುಗಳನ್ನು ರಾಷ್ಟ್ರೀಯ ಹಬ್ಬಗಳು ಎನ್ನುತ್ತೇವೆ.<br><br>1947 ಆಗಸ್ಟ್ 15 ಭಾರತದ ಇತಿಹಾಸದಲ್ಲಿ ಹೊಸ ಮನ್ವಂತರ ಪ್ರಾರಂಭವಾಗಿ ಸ್ವಾತಂತ್ರ್ಯ ಗಳಿಸಿದ ಪವಿತ್ರ ದಿನ. ಸ್ವಾತಂತ್ರ್ಯದ ದಿನವನ್ನು ಆಚರಿಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ. ಭಾರತೀಯರ ಪುಣ್ಯೋದಯದಿಂದ ಸ್ವಾತಂತ್ರ್ಯ ಲಭಿಸಿತು. ಎಷ್ಟೋ ಮಹಾತ್ಮರ ತ್ಯಾಗ, ಬಲಿದಾನವನ್ನು ಸ್ಮರಿಸುವುದೂ ನಮ್ಮೆಲ್ಲರ ಆದ್ಯಕರ್ತವ್ಯ.<br><br>ಅಲ್ಲದೇ, ಸ್ವಾತಂತ್ರ್ಯನಂತರದ ಭಾರತದ ಸಕಲ ಕ್ಷೇತ್ರಗಳಲ್ಲಿನ ಸಾಧನೆಯ ಸಮೀಕ್ಷೆ ಹಾಗೂ ಬೃಹತ್ ಭಾರತದ ಮುಂದಿನ ಸರ್ವತೋಮುಖ ಅಭಿವೃದ್ಧಿಯ ಚಿಂತನೆ ನಡೆಸುವುದು. ಈ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸುವ ಉದ್ದೇಶವಾಗಿದೆ.<br><br>1950 ಜನವರಿ 26 ಗಣರಾಜ್ಯೋತ್ಸವದ ದಿನ. ನಮ್ಮದೇ ಆದ ಸಂವಿಧಾನವನ್ನು ಜಾರಿಯಲ್ಲಿ ತಂದ ಸವಿನೆನಪಿನ ದಿನ. ನಮ್ಮದೇ ಆದ ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನು ಪಡೆದಿದ್ದೇವೆ.<br><br>ರಾಷ್ಟ್ರಧ್ವಜವು ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರಗೌರವದ ಹೆಮ್ಮೆಯ ಪ್ರತೀಕವಾಗಿದೆ. ಇದರಲ್ಲಿ ಕಂಡುಬರುವ ಮೂರು ಬಣ್ಣಗಳಲ್ಲಿ ಕೇಸರಿ ಬಣ್ಣ ನಿಸ್ವಾರ್ಥತೆಯ ಬಿಳುಪು ಸತ್ಯ, ಶಾಂತಿ, ಪರಿಶುದ್ಧತೆಗಳ, ಹಸಿರು ಸಮೃದ್ಧಿಯ ಸಂಕೇತಗಳಾಗಿವೆ. ಚಕ್ರವು ಧರ್ಮಚಕ್ರದ ಸಂಕೇತವಾಗಿದೆ. ರಾಷ್ಟ್ರಗೀತೆಯು ಐಕ್ಯತೆಯ ವಿಜಯ ಘೋಷಣೆಯ ಸುಮಧುರ ಗೀತೆಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಪ್ರಶ್ನೆಗಳು :<br>ಅ) ರಾಷ್ಟ್ರಧ್ವಜ ಯಾವುದರ ಪ್ರತೀಕವಾಗಿದೆ ಮತ್ತು ಇದರಲ್ಲಿನ ಬಣ್ಣಗಳು ಯಾವುದರ ಸಂಕೇತಗಳಾಗಿವೆ ?<br>ಬ) ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸುವ ಉದ್ದೇಶವೇನು ?<br>ಉತ್ತರ :<br>ಅ) ರಾಷ್ಟ್ರಧ್ವಜವು ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರಗೌರವದ ಹೆಮ್ಮೆಯ ಪ್ರತೀಕವಾಗಿದೆ. ಇದರಲ್ಲಿ ಕಂಡುಬರುವ ಮೂರು ಬಣ್ಣಗಳಲ್ಲಿ ಕೇಸರಿ ಬಣ್ಣ ನಿಸ್ವಾರ್ಥತೆಯ ಬಿಳುಪು ಸತ್ಯ, ಶಾಂತಿ, ಪರಿಶುದ್ಧತೆಗಳ, ಹಸಿರು ಸಮೃದ್ಧಿಯ ಸಂಕೇತಗಳಾಗಿವೆ. ಚಕ್ರವು ಧರ್ಮಚಕ್ರದ ಸಂಕೇತವಾಗಿದೆ.<br>ಬ) ಭಾರತೀಯರ ಪುಣ್ಯೋದಯದಿಂದ ಸ್ವಾತಂತ್ರ್ಯ ಲಭಿಸಿತು. ಎಷ್ಟೋ ಮಹಾತ್ಮರ ತ್ಯಾಗ, ಬಲಿದಾನವನ್ನು ಸ್ಮರಿಸುವುದೂ ನಮ್ಮೆಲ್ಲರ ಆದ್ಯ ಕರ್ತವ್ಯ. ಅಲ್ಲದೇ, ಸ್ವಾತಂತ್ರ್ಯಾನಂತರದ ಭಾರತದ ಸಕಲ ಕ್ಷೇತ್ರಗಳಲ್ಲಿನ ಸಾಧನೆಯ ಸಮೀಕ್ಷೆ ಹಾಗೂ ಬೃಹತ್ ಭಾರತದ ಮುಂದಿನ ಸರ್ವತೋಮುಖ ಅಭಿವೃದ್ಧಿಯ ಚಿಂತನೆ ನಡೆಸುವುದು. ಈ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸುವ ಉದ್ದೇಶವಾಗಿದೆ. | |
| XII. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 37. | ಪ್ರವಾಹದಿಂದಾಗುವ ಪರಿಣಾಮಗಳು.<br><br>ಅಥವಾ<br><br>ಕಂಪ್ಯೂಟರ್ ಶಿಕ್ಷಣದ ಮಹತ್ವ. | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿ 'ಕೀರ್ತಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆರೋಗ್ಯ ತಪಾಸಣೆ ಕೈಗೊಳ್ಳಬೇಕೆಂದು ಕೋರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br><br>ಅಥವಾ<br><br>ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ದಿವ್ಯ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ ರಾಜ್ಯೋತ್ಸವದ ಬಗ್ಗೆ ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸೀಮಾ' ಎಂಬ ತನ್ನ ಗೆಳತಿಗೆ ಪತ್ರವನ್ನು ಬರೆಯಿರಿ.<br><br>ಉತ್ತರ :<br><br>ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | ಅಥವಾ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |